2) ಈ ಬಸ್ ನಿಲ್ದಾಣದ ನಿರ್ವಹಣೆಗಾಗಿ ಸರ್ಕಾರ ಹಣವನ್ನೇನಾದರೂ ಖರ್ಚು ಮಾಡುತ್ತಿದೆಯೇ?

3) ಹಾಗಿದ್ದಲ್ಲಿ ಇದಕ್ಕಾಗಿ ಕಳೆದ 3 ವರ್ಷಗಳಿಂದ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು?

4) ಚಾಮರಾಜನಗರವು ಗಡಿ ಪ್ರದೇಶವಾಗಿದ್ದು ನಮ್ಮ ರಾಜ್ಯ ಪ್ರಯಾಣಿಕರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದ ಸರ್ಕಾರವು ಈಗಿನ ಬಸ್ ನಿಲ್ದಾಣವನ್ನು ಆಧುನೀಕರಣಗೊಳಿಸಿ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

1) ಹೌದು.

ಕುಡಿಯುವ ನೀರು ಮತ್ತು ಶೌಚಾಲಯಗಳಿಗೆ ನೀರು ಸರಬರಾಜನ್ನು ಉತ್ತಮಪಡಿಸಲು ಪ್ರಯತ್ನ ಮಾಡಲಾಗುತ್ತಿದೆ. ಈಗ ಇರತಕ್ಕ ಅಂತರ್ ಜಲ ಬತ್ತಿರುತ್ತದೆ. ಸಾಕಷ್ಟು ನೀರು ಸರಬರಾಜು ಮಾಡಲು ನಗರ ಪುರಸಬೆಯನ್ನು ಕೋರಲಾಗಿದೆ. ಹೆಂಗಸರಿಗೆ ಮತ್ತು ಗಂಡಸರಿಗೆ ಪ್ರತ್ಯೇಕ ಶೌಚಾಲಯವನ್ನು ಒದಗಿಸಲಾಗದೆ.

2) ಹೌದು

3) ರೂ.86,000-00.

4) ಅವಶ್ಯಕತೆಗೆ ಅನುಗುಣವಾಗಿ ಕ್ರಮ ಕೈಗೊಳ್ಳುವುದು.

ಸಾಲ ಮನ್ನಾ ಯೋಜನೆಯಡಿಯಲ್ಲಿ ಕೇಂದ್ರದಿಂದ ಬಂದ ಹಣ

2191 - ಶ್ರೀ ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಲ ಮನ್ನಾ ಯೋಜನೆಯನ್ವಯ ಕೇಂದ್ರ ಸರ್ಕಾರದಿಂದ ರಾಜ್ಯ ಸರಕಾರಕ್ಕೆ ಬಂದಿರುವ ಹಣ ಎಷ್ಟು?

ಆ) ಈ ಯೋಜನೆಯಿಂದ ರಾಜ್ಯದಲ್ಲಿ ಇದುವರೆಗೂ ಪ್ರಯೋಜನ ಪಡೆದಿರುವ ಸಂಖ್ಯೆ ಎಷ್ಟು?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ರೂ. 92.66 ಕೋಟಿ

ಆ) ರೂ. 4,77,745.

ದ. ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಸೌಲಭ್ಯ

2446 - ಶ್ರೀ ಬಸವರಾಜ (ಬ್ರಹ್ಮಾವರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯು ಸಂಪೂರ್ಣ ಸಾಕ್ಷರತಾ ಜಿಲ್ಲೆಯಾಗಿ ಮಾರ್ಪಟ್ಟಿರುವುದು ನಿಜವಲ್ಲವೆ? ಸಾರ್ವಜನಿಕರ ಜ್ಞಾನವನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ ಗ್ರಂಥಾಲಯ ಇಲಖೆಯಿಂದ ಎಲ್ಲೆಲ್ಲಿ ಅಂತಹ ಸೌಲಭ್ಯಗಳನ್ನು ಒದಗಿಸಿದೆ, (ಹೆಸರುಗಳೊಂದಿಗೆ ವಿವರಗಳನ್ನೊದಗಿಸುವುದು)

ಆ) ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಎಲ್ಲಾ ಮಂಡಲ ಕೇಂದ್ರಗಳಲ್ಲಿ ಕಟ್ಟಡದ ಅನುಕೂಲತೆಯನ್ನು ಕಲ್ಪಿಸಿ ಗ್ರಂಥಾಲಯ ಶಾಖೆಯನ್ನು ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ಹೌದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 18 ಶಾಖಾ ಗ್ರಂಥಾಲಯಗಳು ಮತ್ತು 40 ಪುಸ್ತಕ ವಿತರಣಾ ಕೇಂದ್ರಗಳು ಸೇವೆ ಸಲ್ಲಿಸುತ್ತಿದ್ದು ಇದರ ವಿವರಗಳ ಪಟ್ಟಿ ಲಗತ್ತಿಸಿದೆ.

ಆ) ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ 13 ಮಂಡಳ ಪಂಚಾಯತಿಗಳಲ್ಲಿ ಮಂಡಳ ಗ್ರಂಥಾಲಗಳನ್ನು ತರೆದಿರುವುದಿಲ್ಲ. ಆದರೆ ಸಾಲಿ ಗ್ರಾಮದಲ್ಲಿ ಶಾಖಾ ಗ್ರಂಥಾಲಯವು ಸಾತಾಲ್ ಮತ್ತು ಬ್ರಹ್ಮಾವರ ಪಂಚಾಯತಿಗಳಲ್ಲಿ ಗ್ರಂಥ ವಿತರಣಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು ಉಳಿದ ಕ್ಷೇತ್ರಗಳಲ್ಲಿ ಗ್ರಂಥಾಲಯ ಸೌಲಭ್ಯವನ್ನು ಕಲ್ಪಿಸಲು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹದಿನೆಂಟು ಶಾಖಾ ಗ್ರಂಥಾಲಯ ಮತ್ತು ನಲವತ್ತು ಪುಸ್ತಕ ವಿತರಣಾ ಕೇಂದ್ರಗಳು ಸಾರ್ವಜನಿಕರಿಗೆ ಸೇವೆಯನ್ನು ಸಲ್ಲಿಸುತ್ತಿವೆ. ಅವುಗಳ ವಿವರ ಈ ರೀತಿ ಇದೆ.

ಶಾಖಾ ಗ್ರಂಥಾಲಯಗಳು

1) ಸುಳ್ಯ
2) ಧರ್ಮಸ್ಥಳ
3) ಮೂಡಬಿದ್ರೆ
4) ಉಳ್ಳಾಲ
5) ಮೂಲ್ಕಿ
6) ವಿಟ್ಲ
7) ಸಾಲಿಗ್ರಾಮ
8) ಉಪ್ಪಿನಂಗಡಿ
9) ಮಲ್ಪೆ
10) ಹೆಬ್ರಿ
11) ಬೈಂದೂರು
12) ಉಡುಪಿ
13) ಕಾರ್ಕಳ
14) ಬೆಳ್ತಂಗಡಿ
15) ಕುಂದಾಪುರ
16) ಬಂಟ್ವಾಳ
17) ಸುರತ್ಕಲ್
18) ಪುತ್ತೂರು

ಗ್ರಂಥ ವಿತರಣಾ ಕೇಂದ್ರಗಳು

1) ಕಾಪು
2) ಕರೂರ
3) ಹಿರಿಯಡ್ಕ
4) ಬ್ರಹ್ಮಾವರ
5) ಸಿತನ್ ಕುಂದಾಪುರ
6) ಖಾಮಲಡಕೋನ್
7) ಶಿರವ್
8) ಪುಜಲಕಟ್ಟೆ
9) ತುಂಬೆ
10) ಉಜಿರೆ
11) ಬೆಳ್ಳಾರೆ
21) ಬಜಪೆ
22) ಮೂಡಬಿದ್ರೆ
23) ಅಜೆಕರ್
24) ವೇಣೂರ್
25) ಸುಬ್ರಹ್ಮಣ್ಯ
26) ಗುರುಪುರ
27) ಡಿ.ಸಿ.ಎಸ್.
28) ಬೆಳವೆ
29) ಬಸ್ರೂರ್
30) ಬೈಂದೂರ್
31) ಚೆರ್‌ಕಡಿ

12) ಪಡುಬಿದ್ರೆ
13) ಕೊಡ್ಯಡ
14) ಕಡಬ
15) ಉಪ್ಪಿನಂಗಡಿ
16) ವಿಟ್ಲ
17) ಕೋಟಿಕಾರ್
18) ಹೆಬ್ರಿ
19) ಗಂಗೊಳ್ಳಿ
20) ನಾರ್ವಿ
32) ಅಲ್ಲೂರ್ ಕಡೆ
33) ಸುರತ್ಕಲ್
34) ನೀರೆಬೈಲೂರ್
35) ಶಿರೂರ
36) ಕಿನ್ನಿಗೋಳಿ
37) ಮಾಣಿ
38) ಕೆಮ್ಮಿಜೆ
39) ಮುದರೆಗಾಡಿ
40) ಸಾತಾಲ

ಉಡುಪಿ ತಾಲ್ಲೂಕಿನ ಖಾಸಗಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಅಧ್ಯಾಪಕರ ಹುದ್ದೆಗಳ ಸಂಖ್ಯೆ

2447 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ತಾಲ್ಲೂಕಿನ ಖಾಸಗಿ ಪ್ರೌಢಶಾಲೆಗಳಲ್ಲಿರುವ ಅಧ್ಯಾಪಕರುಗಳ ಹುದ್ದೆಗಳ ಸಂಖ್ಯೆ ಎಷ್ಟು? ಹಾಗಿದ್ದಲ್ಲಿ ಸದರಿ ಹುದ್ದೆಗಳ ಖಾಯಂ ಆಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು(ಶಾಲಾವಾರು ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)*

ಆ) *ಆ ಹುದ್ದೆಗಳನ್ನು ನೇಮಕಾತಿ ನಿಯಮಗಳಿಗನುಗುಣವಾಗಿ ಭರ್ತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?*

ಇ) *ಈ ರೀತಿ ನೇಮಕಾತಿ ಮಾಡುವಾಗ ಮೀಸಲಾತಿ ನಿಯಮಗಳನ್ನು ಸಹ ಪಾಲಿಸಾಲಾಗಿದೆಯೇ?*

ಈ) *ತಾತ್ಕಾಲಿಕವಾಗಿ ನೇಮಕಾತಿಯನ್ನು ಎಷ್ಟು ಅವಧಿಯವರೆಗೆ ಮುಂದುವರೆಸಲು ಅವಕಾಶವಿದೆ?*

ಉ) *ಹಾಗಿದ್ದಲ್ಲಿ ಅವಧಿ ಮೀರಿದ ನೇಮಕಾತಿಗಳನ್ನು ಮುಂದುವರಿಸಲು ಸರ್ಕಾರಕ್ಕೆ ಪ್ರಸ್ತಾವವನ್ನೇನಾದರೂ ಬಂದಿದೆಯೇ ಹಾಗಿದ್ದಲ್ಲಿ ಸದರಿ ಪ್ರಸ್ತಾಪದ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ಅಧ್ಯಾಪಕರುಗಳ ಹುದ್ದೆ 516 ಖಾಯಂ ಆಗಿ ಖಾಲಿ ಇರುವ ಅಧ್ಯಾಪಕರುಗಳ ಹುದ್ದೆ 48 ಶಾಲಾವಾರು ವಿವರ ಪ್ರತ್ಯೇಕವಾಗಿ ಲಗತ್ತಿಸಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಹೌದು

ಈ) ತಾತ್ಕಾಲಿಕವಾಗಿ ನೇಮಕಾತಿಯನ್ನು ಮುಂದುವರೆಸಲು ಅವಕಾಶವಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.